ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಮಕ್ಕಳ ಭವಿಷ್ಯಕ್ಕೆ ಬೆಳಕು ಚೆಲ್ಲುವವರು ಶಿಕ್ಷಕರು. ತಂದೆ–ತಾಯಿಗಳು?




ಹಾಗೆ ಬೆಳಕು ಚೆಲ್ಲಲು ದೀಪ, ಎಣ್ಣೆ, ಬತ್ತಿ, ಕಡ್ಡಿಪೆಟ್ಟಿಗೆ ಕೊಂಡುಕೊಡುವವರು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ಅರಿಯದೆ ಮಾಡಿದ ತಪ್ಪಿಗೆ ಶಿಕ್ಷೆ ಇದೆಯೆ?
ಇದೆ. ಗಣಿತದ ಮೇಷ್ಟ್ರು ಕೊಟ್ಟ ಲೆಕ್ಕವನ್ನು ಅರಿಯದೆ ತಪ್ಪು ಮಾಡಿದ್ದಕ್ಕೆ ಶಿಕ್ಷಿಸುತ್ತಿದ್ದರು.

ಬೂಕನಕೆರೆ ವಿಜೇಂದ್ರ, ಮೈಸೂರು
ಗಂಡು ದೆವ್ವಗಳಿಗಿಂತ ಹೆಣ್ಣು ದೆವ್ವಗಳೇ ಹೆಚ್ಚು ಕಾಟ ಕೊಡುತ್ತವಲ್ಲ?
ಹ್ಞ! ಪುರುಷ ಮೃಗಗಳ ಸ್ತ್ರೀಕಾಟಕ್ಕೆ ಹೋಲಿಸಿದರೆ ದೆವ್ವಗಳದು ಮಕ್ಕಳಾಟ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ದೇವರ ಗುಡಿಯನ್ನು ಸುತ್ತುವುದಕ್ಕೂ, ಹೆಣ್ಣಿನ ಹಿಂದೆ ಸುತ್ತುವುದಕ್ಕೂ ವ್ಯತ್ಯಾಸ?



ವರ ಬೇಕೆಂದರೆ ಅದು; ವಧು/ಒದೆ ಬೇಕೆಂದರೆ ಇದು.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಅತಿಥಿಯಲ್ಲೇಕೆ ತಿಥಿ ಅಡಗಿದೆ?
ಸರಿಯಾದ ಸಮಯಕ್ಕೆ ಹೊರಡದಿದ್ದರೆ ಆತಿಥೇಯರ ಕೆಲಸದ ಶ್ರಾದ್ಧವಾಗುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ
ಖೆಡ್ಡಾ ತೋಡಿ 'ಎಚ್ಚರಿಕೆಯಿಂದ ಆಟವಾಡಿ' ಎಂದು ಆನ್‌ಲೈನ್ ಜೂಜು ಪ್ರಾಯೋಜಕರು ತಿಳಿಸಲು ಕಾರಣ?
ಅದು ಪ್ಯಾಕ್ ಮೇಲಿನ 'ಧೂಮಪಾನ ಹಾನಿಕರ' ಎಂಬುದರ ಮುಂದಿನ ಅವತಾರ.

ಬಿ. ಚಂದ್ರೇಗೌಡ, ಬೆಂಗಳೂರು
ಅಂಕೆಗೂ, ಶಂಕೆಗೂ ಏನು ಸಂಬಂಧ?
ಅಂಕೆಗೆ ನಿಲುಕದ ವಿಷಯದ ಬಗ್ಗೆ ಶಂಕೆ ಹೆಚ್ಚು.

ಎಂ.ಸಿ. ಧನ್ಯತಾ, ಬೆಂಗಳೂರು
ಅಧ್ಯಯನವಿಲ್ಲದ ಅಧ್ಯಾಪಕನನ್ನು ಯಾವುದಕ್ಕೆ ಹೋಲಿಸಬಹುದು?
ಭಾಷಾಜ್ಞಾನವೇ ಇಲ್ಲದ ಶಿಕ್ಷಣ ಸಚಿವರಿಗೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ
ಅಟ್ಟ ಹತ್ತಿದ್ದೀನಿ. ಬೆಟ್ಟ ಹತ್ತಲಾಗುತ್ತಿಲ್ಲ?
ಹಾಗಿದ್ದರೆ ನಿಮ್ಮ ಹೆಸರನ್ನು ಸಣ್ಣಬಲ ಎಂದು ಬದಲಿಸಬೇಕಾಗುತ್ತದೆ!

ಕೆ.ವಿ. ಗೋವಿಂದಾಚಾರಿ, ಮೈಸೂರು
ಭೂಮಿಯ ಆಕಾರ ಗೊತ್ತು. ಆಕಾಶದ ಆಕಾರ ಯಾವುದು?
'ಜೈಲಿನೊಳಗಿನಿಂದ ನೀಲಿ ಟೋಪಿಯಂತೆ ಕಾಣುತ್ತದೆ' ಎಂದಿದ್ದನೊಬ್ಬ ಕೈದಿ.

ಬಿ. ಬಸವರಾಜ್, ಹರಿಹರ
ಬಡತನದಿಂದ ಹೆಚ್ಚು ಮಕ್ಕಳೋ, ಹೆಚ್ಚು ಮಕ್ಕಳಿಂದ ಬಡತನವೋ?
ವಿವೇಕದ ಬಡತನದಿಂದ ಹೆಚ್ಚು ಮಕ್ಕಳು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು. ಒಲ್ಲದ ಹೆಂಡತಿಗೆ?
ಬೆಣ್ಣೆಯಲ್ಲೂ ಮಣ್ಣೇ.

ಜಗದೀಶ ಬಿ ಹೊಸೂರು, ಮೈಸೂರು
ಪ್ರತಿಯೊಂದಕ್ಕೂ ಪ್ರವೇಶ ಪರೀಕ್ಷೆ ಏರ್ಪಡಿಸಿ ಶಾಲಾ ಹಂತದ ಪರೀಕ್ಷೆ ರದ್ದುಗೊಳಿಸಿದರೆ ಏನಾಗುತ್ತೆ?
ಎಷ್ಟೋ ಮಕ್ಕಳು ಒಂಬತ್ತನೆಯ ಕ್ಲಾಸ್ ತಲುಪೋದೂ ಕಷ್ಟವಾಗತ್ತೆ.

ಮಲ್ಲಿಕಾರ್ಜುನ, ಸುರಧೇನುಪುರ
ಸಿನಿಮಾ ನಟರು ತಮ್ಮ ಮೂಲ ಹೆಸರನ್ನು ಮರೆಮಾಚುವುದು ಏಕೆ?
ಕೆಟ್ಟರೆ ಬದಲಾಗಿರುವ ಹೆಸರು ಕೆಡಲಿ ಎಂಬ ಆಲೋಚನೆ.

## ಬಹುಮಾನಿತ ಪ್ರಶ್ನೆ

ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ
ಇಂದಿನವರೆಗೆ ರಿಯಲ್‌ಗಿಂತ ರೀಲ್ಸ್ ಮೇಲೇ ಆಸಕ್ತಿ. ಹೀಗಾದರೆ ಮುಂದೆ ಗತಿ ಏನಾಗಬಹುದು?
ಭವಿಷ್ಯದೊಡನೆ ಚ್ಯಾಟ್ ಸ್ನ್ಯಾಪ್ ಆಗಿ ಲಿಂಕ್ಡ್‌ಇನ್ನಿಗೂ ಎಕ್ಸ್ ಆಗಿಬಿಡುತ್ತಾರೆ.

ಬಿ.ಆರ್. ಉಷಾ, ಬೆಂಗಳೂರು
ವಿಧವೆಗೆ ಬಿಳಿ, ಕೆಂಪು ಸೀರೆ. ವಿಧುರನಿಗೆ?
ಬೆಳ್ಳನೆಯ, ಕೆಂದುಟಿಯ ನೀರೆ!

ಪಿ.ಜೆ. ರಾಘವೇಂದ್ರ, ಮೈಸೂರು
ಹಸಿ ಸುಳ್ಳು ಇರುವಂತೆ ಒಣ ಸುಳ್ಳು ಏಕಿಲ್ಲ?
ರಸಹೀನವಾದ ಸುಳ್ಳಿಗೆ ಆಕರ್ಷಿಸುವ ಶಕ್ತಿ ಇರುವುದಿಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಅರಿತರೆ ಶಿವ; ಅರಿಯದಿದ್ದರೆ ಶವ. ಇದರ ಅರ್ಥ ತಿಳಿಸಿ?
ಅರಿತವನು ಅರಸ; ಅರಿಯದವನು ಅ–ರಸ ಎಂದು.

ನೇಸರ, ಬೆಂಗಳೂರು
ನನಗೆ ನೀರು ಕಾಣಿಸುತ್ತದೆ. ಆದರೆ ಮೀನುಗಳಿಗೆ ಗಾಳಿ ಕಾಣಿಸುತ್ತಾ?



ಕಾಣಿಸುವಷ್ಟರ ಮಟ್ಟಿಗೆ ನಾವು ವಾಯುಮಾಲಿನ್ಯ ಮಾಡಿದ್ದೇವೆ.

ಅನಸೂಯಾ ಟಿ, ಕೇದಿಗೆಮನೆ
ಫೇಸ್‌ಬುಕ್‌ನಲ್ಲಿ ಗೀಚಿದವನೇ ಫೇಮಸ್ ಆಗಿದ್ದಾನಲ್ಲ?
ಅವನಿಗಿಂತ ದಡ್ಡರನ್ನಷ್ಟೇ ಫ್ರೆಂಡ್ ಮಾಡಿಕೊಂಡದ್ದರ ಫಲವಂತೆ.

■ ರಾಮ್